AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ಮುಸ್ಲಿಂ ಸ್ತ್ರೀ ಸಂವೇದನೆ

(ಸಾರಾ ಅಬೂಬಕರ್ ಮತ್ತು ಬಾನು ಮುಷ್ತಾಕರ ಕತೆಗಳನ್ನು ಅನುಲಕ್ಷಿಸಿ)

**ಡಾ. ಚೇತನಾ ಹೆಗಡೆ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮೆಲ್ ಕಾಲೇಜು, ಸ್ವಾಯತ್ತ
ವಸಂತನಗರ, ಬೆಂಗಳೂರು
chetuhegde@gmail.com

**ಪೀಠಿಕೆ :**

ದಲಿತ ಸಂವೇದನೆ ಭಿನ್ನವಾದಂತೆ ಮುಸ್ಲಿಂ ಸಂವೇದನೆಯು ತನ್ನ ಭಿನ್ನ ಅಭಿವ್ಯಕ್ತಿ ದಾಖಲಿಸಿತು. ಮುಸ್ಲಿಂ ಸಂವೇದನೆಯನ್ನು ದಲಿತ ಬಂಡಾಯ ಸಾಹಿತ್ಯದ ಇನ್ನೊಂದು ಆಯಾಮವಾಗಿ ಗುರುತಿಸಬಹುದು. ಇಲ್ಲಿ ಮುಸ್ಲಿಂ ಲೋಕದ ಮೌನ ಕರಗಿ ಮಾತಾಗಿ ಹೊರಹೊಮ್ಮಿದೆ. ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆ ಇಲ್ಲಿ ಅನಾವರಣಗೊಳ್ಳುತ್ತದೆ. ಮುಸ್ಲಿಂ ಹೆಣ್ಣುಮಕ್ಕಳು ತಮ್ಮ ಧಾರ್ಮಿಕ ಹಿನ್ನಲೆಯಲ್ಲಿ ಧಾರ್ಮಿಕ ಅನುಭವಗಳ ಜೊತೆಯಲ್ಲಿ ತಮಗಾಗುತ್ತಿರುವ ಸಂಕಟ, ಪರಿಪಾಟಲನ್ನು ಮುಕ್ತವಾಗಿ ಬರೆಯಲು ಶುರು ಮಾಡಿದರು. ವಿಶ್ವಾತ್ಮಕವಾಗಿ ಹೆಣ್ಣನ್ನು ಪರಿಭಾವಿಸಿದಾಗ ಧರ್ಮ, ಜಾತಿ, ಜನಾಂಗ ಎಲ್ಲ ಮೇರೆಯನ್ನು ಮೀರಿ ಜಗತ್ತಿನ ಎಲ್ಲ ಹೆಣ್ಣಿನ ಅನುಭವಗಳು ಒಂದೇ ಎಂದು ಗುರುತಿಸುವುದು ಒಂದು ನೆಲೆ. ಹೆಣ್ತನ ಒಂದೇ ಇದ್ದರೂ ಧಾರ್ಮಿಕ, ಜನಾಂಗಿಕ, ಪ್ರಾದೇಶಿಕವಾಗಿ ಬೇರೆ ಇದ್ದಾಗ ವಿಭಜಿತ ಸವಾಲು ಬೇರೆಯಾಗುತ್ತದೆ. ಸೂಕ್ಷ್ಮವಾಗಿ ಗಮನಿಸಿದಾಗ ಬಾಹ್ಯವನ್ನು ನಿಯಂತ್ರಿಸುವ ಸಾಮಾಜಿಕ, ಸಾಂಸ್ಕೃತಿಕ ಅಂಶಗಳಿಂದ ಮುಕ್ತವಾಗಿ ಹೆಣ್ಣನ್ನು ನೋಡಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಹೆಣ್ಣಿನ ಧಾರ್ಮಿಕ ಸಂವೇದನೆಯನ್ನು ವಿಂಗಡಿಸಿ ನೋಡುವುದು ಕನ್ನಡ ಸಾಹಿತ್ಯಕ್ಕೆ ಅನಿವಾರ್ಯವಾಗುತ್ತದೆ. ಮುಸ್ಲಿಂ ಧರ್ಮ ಭಿನ್ನವಾಗಿರುವುದರಿಂದ ಗುರುತಿಸುವುದು ಮುಖ್ಯವೆನಿಸುತ್ತದೆ.

ಸಮುದಾಯದ ಸಮಸ್ಯೆ ಅನಾವರಣ ಮಾಡಲು ಆರಂಭಿಸಿದಾಗ ಮೊದಲು ವಿರೋಧ ಬರುವುದು ಸಮುದಾಯದಿಂದಲೆ, ಸಮುದಾಯದ ಒಳಗಿದ್ದು, ಅಲ್ಲಿನ ಲೋಪದೋಷವನ್ನು ಎತ್ತಿ ತೋರುವುದನ್ನು ಅಲ್ಲಿನ ಸಮಾಜ ಜೀರ್ಣಿಸಿಕೊಳ್ಳದು. ಅವುಗಳನ್ನು ಎದುರಿಸಿ ಸಾಹಿತ್ಯಕ್ಕೆ ಅಪರಿಚಿತವಾಗಿದ್ದ ವಲಯದ ಪದರುಗಳನ್ನು ಬಿಡಿಸಿ ವ್ಯವಸ್ಥೆಯೊಂದಿಗೆ ಮುಖಾಮುಖಿಯಾಗುತ್ತಾ ಹೆಣ್ಣಿನ ನೋವಿನ ಬದುಕನ್ನು ಅನಾವರಣಗೊಳಿಸಲಾಗಿದೆ. ಕನ್ನಡ ಸಾಹಿತ್ಯದ ಮುಂದೆ ತಮ್ಮ ಪ್ರಪಂಚವನ್ನು ತೆರೆದಿಟ್ಟಂತೆ ಹೊಸ ಅಂಶಗಳ ಜೊತೆಯಲ್ಲಿ ಭಾಷೆಗೆ ಅನೇಕ ಶಬ್ದಗಳು ಸೇರ್ಪಡೆಯಾದವು. ಮುಸ್ಲಿಂ ಸಮುದಾಯದ ರೀತಿನೀತಿ, ಆಚಾರ, ವಿಚಾರ, ನಂಬಿಕೆ ಎಲ್ಲವೂ ಅರ್ಥವಾಗಲು ದಾರಿಯನ್ನು ತೋರಿದಂತೆ ಕಿಟಕಿ ತೆರೆದಂತೆ ವಿಭಿನ್ನ ಬದುಕು ದಾಖಲೆಗೆ ಒಳಗಾಯಿತು. ಧಾರ್ಮಿಕತೆ ಹೆಣ್ಣನ್ನು ಕಟ್ಟಿಡುವ ರೀತಿ ಮತ್ತು ಸಾಂಪ್ರದಾಯಿಕ ಮೌಲ್ಯಗಳು ಅವಳ ಬದುಕಿಗೆ ಸಂಕೋಲೆಗಳಾಗುವುದನ್ನು ಇಲ್ಲಿನ ಸಾಹಿತ್ಯ ಬಿಚ್ಚಿಡುತ್ತದೆ. ಅವಳ ಶೋಷಣೆಯ ಹಲವು ಮುಖಗಳನ್ನು ದಾಖಲಿಸುತ್ತ, ಧಾರ್ಮಿಕ ನೆಲೆಯಲ್ಲಿ ಎದುರಿಸಬಹುದಾದ ಸವಾಲುಗಳನ್ನು ಪ್ರಸ್ತಾಪಿಸುತ್ತ, ಆಂತರ್ಯದಲ್ಲಿ ಗುಪ್ತಗಾಮಿನಿ ಸ್ವರೂಪದಲ್ಲಿ ಮೂಡುತ್ತಿರುವ ಪ್ರತಿಭಟನೆಯ ಎಳೆಗಳನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸುತ್ತಿದೆ.

ಈ ಲೇಖನದಲ್ಲಿ ಸಾರಾ ಅಬೂಬಕರ್ ಮತ್ತು ಬಾನು ಮುಷ್ತಾಕ್ ಅವರ ಕತೆಗಳಲ್ಲಿ ಕಂಡುಬರುವ ಸ್ತ್ರೀ ಸಂವೇದನೆಯನ್ನು ಅರ್ಥೈಸಲಾಗಿದೆ. ಸಾರಾ ಅಬೂಬಕರ್ ಹೇಳುವಂತೆ **"ನಮ್ಮ ಸಮಾಜಗಳಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಹಲವು ವಿಧದ ದೌರ್ಜನ್ಯ ಮತ್ತು ಶೋಷಣೆಗಳ ಸುದ್ದಿಗಳೇ ನನ್ನ ಸಾಹಿತ್ಯ ಕೃತಿಗಳಿಗೆ ವಿಷಯಗಳಾಗಿವೆ. ಕೆಲವು ಮಹಿಳೆಯರು ತಾವು ಅನುಭವಿಸಿದ ಸಂಕಷ್ಟ ಮತ್ತು ನೋವುಗಳನ್ನೇ ನನ್ನ ಮುಂದೆ ವಿವರಿಸಿದರೆ, ಇನ್ನೂ ಕೆಲವರು ಸಮಾಜವೆಂಬ ಪರದೆಯ ಹಿಂದೆ ನಡೆಯುತ್ತಿರುವ ಮಹಿಳಾ ಶೋಷಣೆಯ ಕೆಲವು ಮುಖಗಳನ್ನು ನನ್ನ ಮುಂದೆ ತೆರೆದಿಡುತ್ತಾರೆ."**[1]

ಮುಸ್ಲಿಂ ಸಮುದಾಯದಲ್ಲಿ ಕಾನೂನು ಮನ್ನಣೆ ಪಡೆದ ಬಹುಪತ್ನಿತ್ವ ಅವಳ ಅಸ್ಮಿತೆಯನ್ನು ಹತ್ತಿಕ್ಕುವ ಬಗೆಯನ್ನು ಅನಿಯಂತ್ರಿತ ಕುಟುಂಬ. ಅತಿ ಸಂತಾನ, ಶೀಘ್ರ ವಿವಾಹ, ವಸ್ತ್ರ ಸಂಹಿತೆಯ ಬಿಗಿ ಕಟ್ಟುಪಾಡುಗಳು ಸಂತಾನ ನಿಯಂತ್ರಣದ ಕುರಿತಾದ ಭಯ, ತಲಾಖ್ ಪದ್ಧತಿ ಇದೆಲ್ಲ ಸ್ತ್ರೀಯ ಅಸ್ಮಿತೆಯನ್ನು ಹುದುಗಿಸಿ ಅವಳ ಅಸ್ತಿತ್ವವನ್ನು ಕಡೆಗಣಿಸುವ ನಿರಾಕರಿಸುವ ಅಂಶಗಳನ್ನು ಸಾರಾ ಮತ್ತು ಬಾನು ಮುಷ್ತಾಕರ ಕತೆಗಳು ಕಟ್ಟಿಕೊಡುತ್ತವೆ. ಇಲ್ಲಿ ಹೆಣ್ಣು ದೇಹವಾಗಿ ಮಾತ್ರ ಪರಿಗಣಿಸಲ್ಪಡುತ್ತಿದ್ದು ಅವಳ ಭಾವನೆಗಳಿಗೆ ಯಾವ ಮಹತ್ವವೂ ಇಲ್ಲದ ಸೂಕ್ಷ್ಮಗಳು ಚರ್ಚಿತವಾಗುತ್ತವೆ. ಮುಸ್ಲಿಂ ಸಮುದಾಯದ ಪರಿಸರ–ಜನಜೀವನ, ಅವರ ಪ್ರತಿಷ್ಠೆ, ನೋವು, ನಲಿವು, ಆಚಾರ, ವಿಚಾರ, ಸಂಪ್ರದಾಯದ ಅನುಕರಣೆ, ಬದಲಾಗುತ್ತಿರುವ ಸ್ತ್ರೀ – ಪುರುಷ ಸಂಬಂಧಗಳು, ವೈಚಿತ್ರ್ಯಗಳು, ಪುರುಷ ಪ್ರಧಾನತೆಯ ಮೌಲ್ಯಗಳು ಸ್ತ್ರೀಯನ್ನು ಹತ್ತಿಕ್ಕುವ ಬಗೆ, ಆಧುನಿಕ ಸಂದರ್ಭದಲ್ಲಿ ನಿಧಾನವಾಗಿ ಸ್ತ್ರೀ ಅದನ್ನು ಮೀರುವ ಮನಸ್ಥಿತಿಯ ಒಳನೋಟ ಎಲ್ಲವನ್ನೂ ಬಾನು ಮುಷ್ತಾಕ ದಾಖಲಿಸುತ್ತಾರೆ. ಗಂಡು – ಹೆಣ್ಣಿನ ಸಂಬಂಧದ ಪರಿಶೀಲನೆಗೆ ಹೊರಟಾಗ ಸಾರಾ ಅಬೂಬಕರ ಗಂಡಿನ ಕ್ರೌರ್ಯವನ್ನು ಮತ್ತು ಸ್ತ್ರೀ ವೇದನೆಯನ್ನು ಬಿಚ್ಚಿಡುತ್ತಾರೆ. ಬಾನು ಮುಷ್ತಾಕ ಸ್ತ್ರೀ ಅಂತರಂಗವನ್ನು ಅವಳ ನೋವುಗಳನ್ನು ದಾಖಲಿಸುತ್ತಲೇ ಬದಲಾದ ಸಂದರ್ಭದ ಸ್ತ್ರೀ ಚಿತ್ರಣವನ್ನು ಸೂಕ್ಷ್ಮವಾಗಿ ಕಟ್ಟಿಕೊಡುತ್ತಾರೆ. ಹೆಣ್ಣಿನ ಚಿಕ್ಕ ಚಿಕ್ಕ ಸ್ವಾತಂತ್ರ್ಯಗಳಿಗೂ ವ್ಯವಸ್ಥೆ ಕಡಿವಾಣ ಹಾಕುವ ರೀತಿ ಇಲ್ಲಿ ಅನಾವರಣಗೊಳ್ಳುತ್ತದೆ.

ದುಡಿಯುವ ವರ್ಗ ಮತ್ತು ಮಧ್ಯಮವರ್ಗದ ಸ್ತ್ರೀ ಚಿತ್ರಣವನ್ನು ಸಾರಾರ ಕಥೆಗಳಲ್ಲಿ ಗುರುತಿಸಬಹುದಾಗಿದೆ. ಬಹುಪಾಲು ಕತೆಗಳಲ್ಲಿ ಮಿತಿಯಿಲ್ಲದ ಸಂತಾನ ಹಲವು ಸಮಸ್ಯೆಗಳನ್ನು ಸೃಷ್ಟಿಸುವುದು ಕಂಡುಬರುತ್ತದೆ. ಪರಿಸ್ಥಿತಿಗೆ ಬಲಿಯಾದ ಹಲವು ಪಾತ್ರಗಳು ಅಂತ್ಯಗೊಳ್ಳುವುದು ಸಾವಿನಲ್ಲಿಯೇ ಎಂಬುದು ದುರಂತ. ಪ್ರತಿಷ್ಠೆಗಾಗಿ ಮಕ್ಕಳ ಬದುಕನ್ನು ನುಚ್ಚುನೂರಾಗಿಸುವ ತಂದೆ ಇಲ್ಲಿ ಕಂಡುಬರುತ್ತಾರೆ. ತಮ್ಮದೇ ಮಕ್ಕಳಾಗಿದ್ದರೂ ಗಂಡು–ಹೆಣ್ಣು ಬೇರೆ–ಬೇರೆ ಎಂಬ ತಾರತಮ್ಯ ತೋರುವ ಪಾಲಕರ ವರ್ತನೆಯನ್ನು ಸುಣ್ಣ ಕತೆ ಬಿಂಬಿಸುತ್ತದೆ. ಹೆಣ್ಣು ಮಗಳೆಂಬ ಕಾರಣಕ್ಕೆ ಹೆಚ್ಚಿನ ವಿದ್ಯಾಭ್ಯಾಸ ನೀಡದೆ, ಏನೂ ವಿಚಾರಿಸದೆ ಅಪ್ರಯೋಜಕನೊಂದಿಗೆ ವಿವಾಹ ಮಾಡಿ ಅವಳ ಹಣೆ ಬರಹವೇ ಅಷ್ಟು ಎಂದು ಸಮಾಧಾನ ಹೊಂದಿದ ನಾಯಕ ಇಳಿ ವಯಸ್ಸಿನಲ್ಲಿ ತನ್ನನ್ನು ಪುನಾರವಲೋಕನ ಮಾಡಿಕೊಳ್ಳುತ್ತಾನೆ. ಗಂಡುಮಕ್ಕಳು ಸೊಸೆಯಿಂದಿರು ತೋರುತ್ತಿದ್ದ ನಿರ್ಲಕ್ಷದ ನೋವಿದ್ದರೂ ಬಡತನದ ಬೇಗೆಯಲ್ಲಿ ಬದುಕುವ ಮಗಳಿಗೆ ಆಸ್ತಿಯಲ್ಲಿ ಪಾಲು ನೀಡಲು ಆತ ಸಮ್ಮತಿಸಲಾರ. ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದಕ್ಕೆ ಸುಣ್ಣ ಹಚ್ಚುವ, ಹೆಣ್ಣು ಮಕ್ಕಳನ್ನು ಅನಾದರದಿಂದ ಕಾಣುವ ವ್ಯವಸ್ಥೆಗೆ ಹಿಡಿದ ಕನ್ನಡಿಯಂತಿದೆ 'ಸುಣ್ಣ' ಕತೆ.

ಕೊಲ್ಲಿ ರಾಷ್ಟ್ರಗಳಿಂದ ಸ್ವಲ್ಪ ಸಮಯದ ರಜೆಗೆಂದು ಬಂದ ವ್ಯಕ್ತಿಗಳು ಇಲ್ಲಿನ ಹೆಣ್ಣಿನ ಬದುಕಿನ ಜೊತೆ ಚೆಲ್ಲಾಟವಾಡುವ ಪರಿಸ್ಥಿತಿಯನ್ನು 'ಕನಸುಗಳ

ಹಾದಿಯಲ್ಲಿ' ಕತೆ ಅನಾವರಣ ಮಾಡುತ್ತದೆ. ಅನಾಥಾಶ್ರಮದ ಬಡ ಹೆಣ್ಣು ಮಕ್ಕಳನ್ನು ವಿವಾಹವಾಗಿ ಸ್ವಲ್ಪ ದಿನದ ನಂತರ ಅವರಿಗೆ ತಲಾಖ್ ನೀಡುವ ಪುರುಷನ ಕ್ರೂರ ಮನಸ್ಥಿತಿಯನ್ನು ಅದಕ್ಕೆ ಬೆಂಬಲ ನೀಡುವ ಅನಾಥಾಶ್ರಮದಿಂದ ಸಿಬ್ಬಂದಿಗಳ ಹಣದ ಆಸೆ ಆಮಿಷಗಳಿಗೆ ಚಿತ್ರಣ ಇಲ್ಲಿ ಕಂಡುಬರುತ್ತದೆ. ಹೆಣ್ಣಿನ ಭಾವನೆಗಳಿಗೆ ಯಾವ ಮಹತ್ವವನ್ನು ನೀಡದೆ, ಅವಳನ್ನು ತಮ್ಮ ಗುಲಾಮಳಾಗಿ ಪರಿಗಣಿಸುವ ಪುರುಷಪಾತ್ರಗಳು ಹಸನ್‌ಬ್ಯಾರಿ (ಚಪ್ಪಲಿಗಳು), ಶಾಫಿ (ಗೋಡೆ), ಮುದುಕ (ಸುಣ್ಣ), ಅಬ್ಬಾಸ್‌ಹಾಜಿ, ಹೈದರ್ (ಬಿಕರಿಯ ಮಾಲುಗಳು), ಮಾವಂದಿರು ಮತ್ತು ಅನ್ವರ್ (ಭೇಟೆ) ಮುಂತಾದವುಗಳನ್ನು ಹೆಸರಿಸಬಹುದು. ತಮ್ಮ ಕತೆಗಳಲ್ಲಿ ಪುರುಷ ಪ್ರಾಧಾನ್ಯತೆಯ ಅಧಿಕಾರದ ಹಂಬಲದ ದರ್ಪದ ವ್ಯಕ್ತಿಗಳನ್ನು ಪರಿಚಯಿಸಿದಂತೆ ಸಾರಾ ಆಧುನಿಕ ತರುಣರಲ್ಲಿ ಬದಲಾಗುತ್ತಿರುವ ಮನೋಭಾವವನ್ನೂ ಬಿಂಬಿಸುತ್ತಾರೆ. ಕಾಲ ಬದಲಾದಂತೆ ಶಿಕ್ಷಣ ಪಸರಿಸಿದಂತೆ ದರ್ಪ ಭಾವವನ್ನು ಬದಿಗೊತ್ತಿ ಸಂಗಾತಿಯ ಮನಸ್ಥಿತಿಗೆ ಭಾವನೆಗೆ ಗೌರವ ನೀಡುವ, ಪತ್ನಿ ಶಿಕ್ಷಣ ಹೊಂದಿರಲಿ ಎಂದು ಬಯಸುವ ತರುಣ ಪೀಳಿಗೆಯ ಭಾವ ಇಲ್ಲಿ ಅಭಿವ್ಯಕ್ತವಾಗಿದೆ. ಶಬೀರ್ (ಚಪ್ಪಲಿಗಳು), ರಾಹಿಲ್ (ಯುದ್ಧ) ಸತ್ತಾರ (ಗೋಡೆ) ಅಸ್ಗರ್ ಅಲಿ (ಕನಸುಗಳ ಹಾದಿಯಲ್ಲಿ), ಜಮಾಲುದ್ದೀನ್ (ಬಂದಣಿಗೆ), ಸಲ್ಮಾನ್ (ಬಿಕರಿಯ ಮಾಲುಗಳು) ಮುಂತಾದವರು ಸಂಗಾತಿಗೂ ಮನಸ್ಸಿದೆ ಅದರಲ್ಲಿ ಭಾವನೆಗಳು ಮೂಡುತ್ತದೆ ಅವಳ ಕನಸಿಗೆ, ಆಸೆಗೆ ಸಹಕಾರ ನೀಡಬೇಕು ಎಂಬ ಮನೋಭಾವನೆ ಹೊಂದಿರುವವರು.

ಹೆಣ್ಣು ಹೆರುವ ಯಂತ್ರವಾಗಿ, ಸೌಂದರ್ಯ ಕುಂದರೆ ಇನ್ನೊಬ್ಬಳೊಂದಿಗೆ ತನ್ನ ಗಂಡ, ಮನೆ ಅಧಿಕಾರವನ್ನು ಹಂಚಿಕೊಳ್ಳಬೇಕಾದ ಅನಿವಾರ್ಯಗಳತ್ತ ಸಾರಾ ಅಬೂಬಕರ್ ಮತ್ತು ಬಾನು ಮುಷ್ತಾಕರ ಹಲವು ಪಾತ್ರಗಳು ಮುಖ ಮಾಡುತ್ತದೆ. "ಹೆಂಡತಿ ಸತ್ತರೆ ಗಂಡನಿಗೆ ಮೊಣಕೈ ಎಲುಬಿಗೆ ಪೆಟ್ಟು ಬಿದ್ದಂತೆ ಎಂದು ನಿನಗೆ ಗೊತ್ತ ಜೀನತ್...... ಮೊಣಕೈಗೆ ಏಟು ಬಿದ್ದರೆ, ಒಂದು ಕ್ಷಣ ಭಯಂಕರ, ಅಸಹನೀಯ ನೋವು ಉಂಟಾಗುತ್ತದೆ. ಒಂದೇ ಕ್ಷಣ ಮಾತ್ರ ನಂತರ ಏನೂ ಅನಿಸುವುದಿಲ್ಲ. ಗಾಯವಿಲ್ಲ: ರಕ್ತವಿಲ್ಲ ಗುರುತಿಲ್ಲ, ನೋವಿಲ್ಲ......[2] ಎಂದು ಶಾಹಿಸ್ತ ಹೇಳುವ ಮಾತುಗಳಲ್ಲಿ ಪುರುಷ ಪ್ರಧಾನ ಸಮಾಜ ಹೆಂಡತಿಯ ಆಸೆ, ಆಕಾಂಕ್ಷೆಗಳಿಗೆ ಮಹತ್ವ ನೀಡದೆ ಅವಳನ್ನು ವ್ಯಕ್ತಿಯಾಗಿ ಗೌರವಿಸದೇ ಕೇವಲ ದೇಹವಾಗಿ ಪರಿಗಣಿಸಿದ, ಒಬ್ಬಳು ಸತ್ತರೆ ಇನ್ನೊಬ್ಬಳು ಹೆಂಡತಿ ಸಿಗುತ್ತಾಳೆ ಎಂಬ ತಾತ್ಸಾರದಿಂದ ಕಾಣುವ ದೃಷ್ಟಿಕೋನದತ್ತ ಗಮನ ಸೆಳೆಯುತ್ತದೆ. ಪತ್ನಿ ಸತ್ತಿದ್ದು ಒಮ್ಮೆ ನೋವೆನ್ನಿಸಿದರೂ ಮನಸ್ಸು ಕಾಲ ಬಹುಬೇಗ ದುಃಖ ಮರೆಸಿ ಹೊಸ ಬದುಕಿನ ನಿರೀಕ್ಷೆಯವರೆಗೆ ಕೈ ಚಾಚುತ್ತದೆ. ತಾಯಿಗೆ ಬಾಣಂತನ ಮಾಡಬೇಕಾದ ಪರಿಸ್ಥಿತಿಯಲ್ಲಿನ ಹೆಣ್ಣು ಮಕ್ಕಳು ಎಸ್.ಎಸ್.ಎಲ್.ಸಿ. ಆದ ಕೂಡಲೇ ವಿದ್ಯಾಭ್ಯಾಸವನ್ನು ನಿಲ್ಲಿಸುವ ಕುಟುಂಬ. ತನ್ನ ಜೀವದ ಜೀವ ಎಂದು ಶಾಹಿಸ್ತಳ ಸುತ್ತ ಮುತ್ತ ಸುತ್ತುತ್ತಿದ್ದ ಐವತ್ತು ವರ್ಷದ ಪತಿ ಅವಳು ಏಳನೇ ಹೆರಿಗೆಯ ನಂತರ ಆರೋಗ್ಯದಲ್ಲಿ ವ್ಯತ್ಯಾಸವಾಗಿ ಮರಣಿಸಿದಾಗ ನಲವತ್ತು ದಿನಕ್ಕೆ ಮಗಳ ವಯಸ್ಸಿನ ಹೆಣ್ಣನ್ನು ವಿವಾಹವಾಗುವುದು ಕಂಡುಬರುತ್ತದೆ. ಪತ್ನಿಯ ಮುಂದೆ ಯಾವಾಗಲೂ ಪ್ರೇಮಾಲಪ ಮಾಡುತ್ತ ಅಂಟಿಕೊಂಡಿರುತ್ತಿದ್ದ ಇಫ್ತಿಕಾರ್‌ಗೆ ಬೇಕಿದ್ದದು ಮಾನಸಿಕ ಸಾಮೀಪ್ಯವಲ್ಲ ಕೇವಲ ದೈಹಿಕ ಸಾಮಿಪ್ಯ ಎಂಬುದನ್ನು ಗಮನಿಸಬಹುದಾಗಿದೆ.

ಬಾನು ಮುಷ್ತಾಕರ ಸ್ತ್ರೀ ಪಾತ್ರಗಳು ಅಳುಮುಂಜಿಗಳಲ್ಲ ತಮ್ಮ ಬದುಕಿನ ಸ್ವತಃ ನಿರ್ಧಾರಕ್ಕೆ, ಅನಿಸಿಕೆಗಳಿಗೆ ಗೌರವ ನೀಡುವಂತವರು, ವಿದ್ಯಾವಂತರು. ಅನ್ಯಾಯದ ವಿರುದ್ಧ ಉಗ್ರ ಪ್ರತಿಭಟನೆ ನೀಡುವಂತ ಸ್ಥೈರ್ಯವುಳ್ಳವರು. ಮುಸ್ಲಿಂ ಹೆಣ್ಣುಮಗಳು ತನ್ನ ಪಾಲಿನ ಆಸ್ತಿಯನ್ನು ಕೇಳುವ ಮೂಲಕ ಆರ್ಥಿಕ ಸಬಲತೆಯ ಪ್ರಶ್ನೆಯನ್ನು ಮುಸ್ಲಿಂ ಕಥೆಗಾರ್ತಿಯರು ಎತ್ತುತ್ತಾರೆ. ಬಾನು ಮುಷ್ತಾಕರ 'ಬೆಂಕಿಮಳೆ' ಕಥೆಯಲ್ಲಿ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಕೇಳುವ ಜಮೀಲಾ ಮತ್ತು ಆಸ್ತಿಯ ನ್ಯಾಯಬದ್ಧಪಾಲನ್ನು ನಾಲ್ವರು ತಂಗಿಯರಿಗೆ ಕೊಡಬೇಕು ಎಂದು ಪತಿ ಮುತವಲ್ಲಿ ಉಸ್ಮಾನ ಸಾಹೇಬರಲ್ಲಿ ವಿನಂತಿಸುವ ಪತ್ನಿ ಆರಿಫ ಇಬ್ಬರೂ ಪಿತ್ರಾರ್ಜಿತ ಆಸ್ತಿಯಲ್ಲಿ ಸ್ತ್ರೀಯ ನ್ಯಾಯಬದ್ಧ ಹಕ್ಕನ್ನು ಪ್ರತಿಪಾದಿಸುತ್ತಿದ್ದಾರೆ. ತನ್ನ ದೇಹ ತನ್ನದು ಎಂದು ಎಂದಿಗೂ ಯೋಚನೆ ಮಾಡದಷ್ಟು ವಿಸ್ಮೃತಿಗೆ ತಲುಪಿದ ಹೆಣ್ಣು ಮಕ್ಕಳು ಗರ್ಭನಿರೋಧಕ ಆಪರೇಷನ್ ಎಂಬ ಹೊಸ ಪ್ರತಿರೋಧವನ್ನು ವ್ಯವಸ್ಥೆಗೆ ಒಡ್ಡುತ್ತಿದ್ದಾರೆ. ಏಳು ಮಕ್ಕಳ ತಾಯಿ ಆಮಿನ ಗಂಡನ ವಿರೋಧದ ನಡುವೆ ಮಕ್ಕಳಾಗದಂತೆ ಆಪರೇಷನ್ ಮಾಡಿಸಿಕೊಳ್ಳುವುದು ಬಾನು ಮುಷ್ತಾಕರ ಕರಿನಾಗರ' ಕಥೆಯಲ್ಲಿ ಕಂಡುಬರುತ್ತದೆ. ಇದು ಬದಲಾಗುತ್ತಿರುವ ಮುಸ್ಲಿಂ ಸ್ತ್ರೀ ಮನೋಧರ್ಮಕ್ಕೆ ಹಿಡಿದ ಕನ್ನಡಿಯಾಗಿದೆ.

ತನಗೆ ಮತ್ತು ಮಕ್ಕಳಿಗೆ ಆಹಾರ ಒದಗಿಸಲು, ಅನಾರೋಗ್ಯದ ಮಗುವಿಗೆ ಔಷಧಿ ಒದಗಿಸುವ ಬೇಡಿಕೆ ಇಟ್ಟು ಗಂಡನ ಬಗ್ಗೆ ಆಕ್ರೋಶ ವ್ಯಕ್ತಪಡಿಸಿ ದೂರು ನೀಡುವ ಆಶ್ರಫ, ಕುರಾನಿನಲ್ಲಿ ಬರೆದಿಡುವ ಸ್ತ್ರೀ ಪರ ವಿಚಾರಗಳನ್ನು ತಮಗೆ ಬೇಕಂತೆ ತಿರುಚಿಕೊಂಡ ಪುರುಷ ವ್ಯವಸ್ಥೆ ವಿರುದ್ಧ ಮಾತನಾಡುವ ಜುಲೇಖಬೇಗಂ ಮುಂತಾದ ಪಾತ್ರಗಳ ಮೂಲಕ 'ಕರಿನಾಗರ' ಕಥೆಯಲ್ಲಿ ಬಾನು ಮುಷ್ತಾಕ ಸ್ಥಗಿತಗೊಂಡಿದ್ದ ಮುಸ್ಲಿಂ ಜಗತ್ತಿನಲ್ಲಿ ಒಂದು ಪ್ರತಿರೋಧದ ಅಲೆ ಸಾವಕಾಶವಾಗಿ ಏಳುತ್ತಿರುವುದನ್ನು ದಾಖಲಿಸುತ್ತಾರೆ. ಅದು ಬಾನು ಮುಷ್ತಾಕರಲ್ಲಿ ವೈಚಾರಿಕ ಸ್ಪಷ್ಟತೆಯಿಂದ ಮೂಡುತ್ತದೆ.

ಹೆಣ್ಣಿನ ಚಿಕ್ಕ ಚಿಕ್ಕ ಸ್ವಾತಂತ್ರ್ಯಗಳಿಗೂ ವ್ಯವಸ್ಥೆ ಕಡಿವಾಣ ಹಾಕುವ ರೀತಿ ಇಲ್ಲಿ ಅನಾವರಣಗೊಳ್ಳುತ್ತದೆ. ತಾಯಿ–ಮಗಳ ಸಂಬಂಧ ಬಹುತೇಕ ಕತೆಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಮೂಡಿಬಂದಿದೆ. ತಾಯಿಗಾಗುತ್ತಿರುವ ಅನ್ಯಾಯಗಳಿಗೆ ಅಸಹಾಯಕ ಪ್ರೇಕ್ಷಕಳಾದ ಮಗಳು ಅವಳ ನೋವಿಗೆ ಸಾಂತ್ವನ ನೀಡಲು ಪ್ರಯತ್ನಿಸುತ್ತಾಳೆ. ಸಮಸ್ಯೆಗಳಿಗೆ ಪರಿಹಾರ ನೀಡಲಾಗದ ಅಸಹಾಯಕ ಸ್ಥಿತಿಯಲ್ಲಿದ್ದರೂ, ಒಬ್ಬರಿಗೊಬ್ಬರು ಸ್ಪಂದಿಸುವ, ಭಾವನಾತ್ಮಕವಾಗಿ ಸಹಕರಿಸುವ, ಸ್ಥೈರ್ಯ ನೀಡುವ ಅತ್ತಿಗೆ–ನಾದಿನಿ, ಅಕ್ಕತಂಗಿ, ನೆರೆಹೊರೆ ಪರಿಚಿತರು, ಸಂಬಂಧಿಕರು, ಸ್ನೇಹಿತೆಯರು ಮುಂತಾದ ಸಂಬಂಧಗಳು ಕಂಡುಬರುತ್ತಿದೆ. ಸ್ತ್ರೀ ಸಮುದಾಯ ಒಗ್ಗಟ್ಟಾಗುತ್ತಿರುವ ಸೂಚನೆ ಅಭಿವ್ಯಕ್ತವಾಗುತ್ತಿದೆ. ತನ್ನ ಪಾಲಿನ ಆಸ್ತಿ ಕೇಳುವ ತಂಗಿ, ತಲಾಖ್ ವಿರುದ್ಧ ಪ್ರತಿರೋಧ, ಹಕ್ಕಿನ ಪ್ರತಿಪಾದನೆ, ಮಸೀದಿ ಮುಂದೆ ಧರಣಿ ಕೂರುವುದು, ಪತಿಯ ಮಾತನ್ನು ಮೀರಿ ಸಂತಾನ ನಿಯಂತ್ರಣದ ಪ್ರಯತ್ನಗಳು ಮುಂತಾದ ಬದಲಾವಣೆಗಳು ಮುಸ್ಲಿಂ ಮಹಿಳೆಯರಲ್ಲಿ ಕಂಡುಬರುತ್ತಿರುವುದನ್ನು ಲೇಖಕಿಯರು ಪ್ರತಿಬಿಂಬಿಸಿದ್ದಾರೆ.

**ಉಪಸಂಹಾರ:**

ಈ ಎಲ್ಲ ಬದಲಾವಣೆಗಳು ಸ್ತ್ರೀಯರು ತನ್ನ ಅಸ್ಮಿತೆಯ ಹುಟುಕಾಟಕ್ಕೆ, ಅಸ್ತಿತ್ವದ ಉಳಿವಿಗೆ ಮಾಡುವ ಹೋರಾಟಕ್ಕೆ ಸಾಕ್ಷಿಯಾಗುತ್ತವೆ. ತಮಗಾಗುತ್ತಿರುವ ಶೋಷಣೆಯ ಅರಿವು ಮುಸ್ಲಿಂ ಮಹಿಳೆಯರ ಗ್ರಹಿಕೆಗೆ ನಿಲುಕುತ್ತಿದ್ದು, ಶೋಷಣೆ ವಿರುದ್ಧ ಪ್ರತಿರೋಧ ಕಂಡುಬರುತ್ತಿದೆ. ಪಿತ್ರಾರ್ಜಿತ ಆಸ್ತಿಗಾಗಿ ಹೋರಾಟ ಸ್ತ್ರೀಯರಿಗೆ ಕಾನೂನಿನ ಅರಿವು ಉಂಟಾಗುವ ಸೂಚನೆಯಾಗಿದ್ದು, ಮುಸ್ಲಿಂ ಮಹಿಳೆಯರು ತಮ್ಮ ಹಕ್ಕುಗಳಾಗಿ ಧ್ವನಿ ಎತ್ತುವ ಪ್ರಗತಿಪರ ನಿಲುವನ್ನು ಅಭಿವ್ಯಕ್ತಿಸುತ್ತಿದ್ದಾರೆ. ಅವರಲ್ಲಿ ಮೂಡಿರುವ ಹೊಸ ಹೊಸ ಚಿಂತನೆಗಳ ಹಿಂದೆ ಶಿಕ್ಷಣ, ಆರ್ಥಿಕ ಸ್ವಾವಲಂಬನೆ ಪಾತ್ರ ಗಮನಾರ್ಹವಾದುದು. ಸಮಾಜ ರೂಪಿಸಿದ ಸಿದ್ಧಮೌಲ್ಯಗಳಿಂದ ಹೊರಬರುವ ಪಾತ್ರಗಳು ಇಲ್ಲಿ ಕಂಡುಬರುತ್ತಿವೆ. ತಮ್ಮ ಸಂಸ್ಕೃತಿಯ ವಿವರಗಳನ್ನು, ಧಾರ್ಮಿಕ ವಲಯದ ನಂಬಿಕೆಗಳನ್ನು, ಜನರನ್ನು ಸುತ್ತುವರೆದಿರುವ ಮೌಢ್ಯವನ್ನು, ಹೆಣ್ಣಿನ ಬದುಕಿನ ಕತ್ತಲ ವಿವಿಧ ಮುಖಗಳನ್ನು ಮುಸ್ಲಿಂ ಲೇಖಕಿಯರು ಬಿಂಬಿಸುತ್ತಾರೆ.

**ಕೊನೆಟಿಪ್ಪಣಿಗಳು:**

1. ಸಾರಾ ಅಬೂಬಕರ್, 2014, ಚಪ್ಪಲಿಗಳು ಆಯ್ದ ಕತೆಗಳು, ಚಂದ್ರಗಿರಿ ಪ್ರಕಾಶನ, ಮುನ್ನುಡಿ ಪು. III.
2. ಬಾನು ಮುಷ್ತಾಕ, 2013, ಹಸೀನಾ ಮತ್ತು ಇತರ ಕಥೆಗಳು ಅಭಿರುಚಿ ಪ್ರಕಾಶನ, ಮೈಸೂರು, ಪು 44.

**ಪರಾಮರ್ಶನ ಗ್ರಂಥಗಳು:**

1. ಬಾನು ಮುಷ್ತಾಕ, 2012, ಬಡವರ ಮಗಳು ಹೆಣ್ಣಲ್ಲ, ಅಭಿರುಚಿ ಪ್ರಕಾಶನ, ಮೈಸೂರು.
2. ಬಾನು ಮುಷ್ತಾಕ, 2013, ಹಸೀನಾ ಮತ್ತು ಇತರ ಕಥೆಗಳು, ಅಭಿರುಚಿ ಪ್ರಕಾಶನ, ಮೈಸೂರು.
3. ಸಾರಾ ಅಬೂಬಕರ್, 2014, ಚಪ್ಪಲಿಗಳು ಆಯ್ದ ಕತೆಗಳು, ಚಂದ್ರಗಿರಿ ಪ್ರಕಾಶನ.
4. ಸಾರಾ ಅಬೂಬಕರ್, 1989, ಚಪ್ಪಲಿಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು.
5. ಪುರುಷೊತ್ತಮ ಬಿಳಿಮಲೆ, 2017, ಬಂಡಾಯ–ದಲಿತ ಚಳುವಳಿ ಮತ್ತು ಸಾಹಿತ್ಯ, ಅಭಿನವ ಪ್ರಕಾಶನ, ಬೆಂಗಳೂರು.